ಇ) ಇದರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು)-

ಎ) ಬಂದಿದೆ.

ಆ) ಹೌದು.

ಇ) ರೋಗಿಗಳು ಸಂಜೆ ಹೊತ್ತು ತಿರುಗಾಡಲು ಹಾಗೂ ವಿಶ್ರಮಿಸಿಕೊಳ್ಳಲು ಅನುಮತಿ ನೀಡಿದೆ.

ಹರಿಹರ ಪಾಲಿಫೈಬರ್ ಕಾರ್ಖಾನೆಗೆ ನದಿ ನೀರು ಮತ್ತು ವಿದ್ಯುತ್ ಸರಬರಾಜನ್ನು ನಿಲ್ಲಿಸುವುದರ ಬಗ್ಗೆ.

451 (2246)ಶ್ರೀ ವೈ.ಎಂ.ವೀರಣ್ಣ (ದಾವಣಗೆರೆ)

ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಜೀವಿ ಪರಿಸ್ಥಿತಿ ಶಾಸ್ತ್ರಮತ್ತು ಪರಿಸರ ಇಲಾಖೆಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :-

ಎ) ಹರಿಹರ ಪಾಲಿಫೈಬರ್ಸ್ ಕಾರ್ಖಾನೆಗೆ ನೀರು ಮತ್ತು ವಿದ್ಯುಚ್ಛಕ್ತಿ ಸರಬರಾಜು ನಿಲುಗಡೆ ಮಾಡಲು ಈ ಬಗ್ಗೆ ಸರ್ಕಾರವು ಹೊರಡಿಸಿರುವ ಆದೇಶವು ಕಾರ್ಯಗತವಾಗದಿರಲು ಕಾರಣವೇನು ;

ಆ) ಜಲ-ವಾಯು ಮಾಲಿನ್ಯವನ್ನುಂಟು ಮಾಡಿ ಜನ, ಜಾನುವಾರು ಹಾಗೂ ಜಲಚರ ಜೀವಿಗಳಿಗೆ ಮಾರಕವಾಗಿರುವ ಕಾರ್ಖಾನೆ ಆಡಳಿತ ವರ್ಗವು ಸರ್ಕಾರದ ಯಾವುದೇ ಆದೇಶವನ್ನು ಪಾಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಇ) ಪರಿಸರ ನೈರ್ಮಲ್ಯ ಹಾಗೂ ಜನ ಜಾನುವಾರುಗಳ ಆರೋಗ್ಯದ ದೃಷ್ಟಿಯಿಂದ ಕಠಿಣ ಕ್ರಮಗಳನ್ನು ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ ? ಹಾಗಿದ್ದಲ್ಲಿ ವಿವರವನ್ನು ನೀಡುವುದು ?

ಶ್ರೀ ಬಿ.ಬಸವಲಿಂಗಪ್ಪ(ವಿಜ್ಞಾನ ಮತ್ತು,ತಂತ್ರಜ್ಞಾನ ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆಯ ಸಚಿವರು)-

ಎ) ಸರ್ಕಾರವು ಈ ಕಾರ್ಖಾನೆಯ ವಿರುದ್ಧ ವಿದ್ಯುತ್ ಮತ್ತು ನೀರು ಸರಬರಾಜು ಮಾಡದಂತೆ ಆದೇಶವನ್ನು ಹೊರಡಿಸಿಲ್ಲ. ಆದ್ದರಿಂದ ಆದೇಶ ಕಾರ್ಯಗತವಾಗದಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಬಂದಿದೆ.

ಇ) ರಾಜ್ಯ ಸರ್ಕಾರವು ದಿನಾಂಕ 23-3-1992 ರಂದು ಹರಿಹರ ಪಾಲಿಫೈಬರ್ಸ್ ಮತ್ತು ಗ್ರಾಸಿಮ್ ಕಾರ್ಖಾನೆಗಳಿಗೆ ಪರಿಸರ (ಸಂರಕ್ಷಣೆ) ಕಾಯ್ದೆಯ 1986ರ ಅಡಿಯಲ್ಲಿ ನಿಯಮ 5ರ ಪ್ರಕಾರ ಈ ಕಾರ್ಖಾನೆಗಳು ನಿಗದಿ ಪಡಿಸಿದ ಪರಿಮಿತಿಗಿಂತ ಹೆಚ್ಚಿನ ಮಾಲಿನ್ಯವನ್ನು ಹೊರಹೊಮ್ಮುವುದನ್ನು ಏಕೆ ತಡೆಗಟ್ಟಬಾರದೆಂದು ಮತ್ತು ತುಂಗಭದ್ರಾ ನದಿಗೆ ಕಲುಷಿತ ನೀರನ್ನು ಬಿಡದಂತೆಯೂ, ಈ ಎರಡು ಕಾರ್ಖಾನೆಗಳ ಕೆಲಸ ಕಾರ್ಯವನ್ನು ಏಕೆ ನಿಲ್ಲಿಸಬಾರದೆಂದು ಕಾರಣ ಕೇಳುವ ಅಧಿಸೂಚನೆಯನ್ನು ಹೊರಡಿಸಿ, ಇವುಗಳ ಉತ್ತರ 15 ದಿವಸದೊಳಗೆ ಸರ್ಕಾರಕ್ಕೆ ಸಲ್ಲಿಸಬೇಕೆಂದು ಆದೇಶಿಸಲಾಗಿದೆ. ಉತ್ತರ ಪಡೆದ ನಂತರ ಮುಂದಿನ ಕ್ರಮ ಜರುಗಿಸಲಾಗುವುದು.